

ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಇತರ ಧಾರ್ಮಿಕ ಮುಖಂಡರೊಂದಿಗೆ ಸ್ವಾಮಿ ಜಿತಾತ್ಮಾನಂದಜಿ ಮತ್ತು ಡಾ. ಅಬ್ದುಲ್ ಕಲಾಮ್

## ಧರ್ಮಗಳ ಏಕತೆ ಹಾಗೂ ಪ್ರಬುದ್ಧ ಪೌರತ್ವ ಪ್ರತಿಷ್ಠಾನ

೨೦೦೩ರ ಅಕ್ಟೋಬರ್ ೧೫ರಂದು ಆಚಾರ್ಯ ಮಹಾಪ್ರಜ್ಞ ಅವರ ಸಮ್ಮುಖದಲ್ಲಿ ಗುಜರಾತ್‌ನ ಸೂರತ್‌ನಲ್ಲಿ ಭಾರತದ ಸನ್ಮಾನ್ಯ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ನೀಡಲಾದ ಸೂರತ್ತಿನ ಆಧ್ಯಾತ್ಮಿಕ ಘೋಷಣೆಗೆ ಭಾರತದ ಸರ್ವಧರ್ಮಗಳ ಗುರುಗಳು ತಮ್ಮ ಒಪ್ಪಿಗೆಯ ಸಹಿಯನ್ನು ಹಾಕಿದ್ದಾರೆ. ಮುಂದೆ ಇದೇ ಜೂನ್ ೧೪ರಂದು ಮತ್ತೆ ಧರ್ಮಗುರುಗಳು ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಇದರ ರೂಪುರೇಷೆಗಳನ್ನು ಚರ್ಚಿಸಿ, **ಧರ್ಮಗಳ ಏಕತೆ ಹಾಗೂ ಪ್ರಬುದ್ಧ ಪೌರತ್ವ ಪ್ರತಿಷ್ಠಾನ** (*Foundation for Unity of Religions and Enlightened Citizenship*) ಸಂಸ್ಥೆಯ ನೋಂದಣಿ ಪ್ರತಿಯನ್ನು ಜೂನ್ ೧೫ರಂದು ರಾಷ್ಟ್ರಪತಿಗಳಿಗೆ ಸಲ್ಲಿಸಿದರು. ಈ ಪ್ರತಿಷ್ಠಾನದ ಅಧ್ಯಕ್ಷರು ಶ್ರೀರಾಮಕೃಷ್ಣ ಆಶ್ರಮ, ರಾಜಕೋಟ್‌ನ ಮುಖ್ಯಸ್ಥರಾದ ಸ್ವಾಮಿ ಜಿತಾತ್ಮಾನಂದಜಿ ಅವರು. ಅಂದಿನ ಸಭೆಯಲ್ಲಿ ಡಾ. ಅಬ್ದುಲ್ ಕಲಾಮ್ ಅವರು ಮಾತನಾಡುತ್ತ, ಈ ಪ್ರತಿಷ್ಠಾನವು ಎಲ್ಲ ಧರ್ಮಗಳ ಮುಖ್ಯತತ್ತ್ವದ ಏಕತೆಯಲ್ಲಿ ಪ್ರೇಮ ಮತ್ತು ಗೌರವಗಳನ್ನು ಹೊಂದಿರುವ ಪ್ರಬುದ್ಧ ನಾಗರಿಕರುಳ್ಳ ಹೊಸ ಮಾದರಿಯ ಪೀಳಿಗೆಯನ್ನು, ಭವಿಷ್ಯ ಭಾರತದಲ್ಲಿ ತರುವುದರಲ್ಲಿ ಸಂತೋಷವನ್ನೂ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

ಅಹಿಂಸಾತತ್ತ್ವ ಅಧ್ಯಾತ್ಮ ಹಾಗೂ ಎಲ್ಲ ಧರ್ಮಗಳ ಬಗ್ಗೆ ಸಮಾನ ಗೌರವ ಭಾವನೆಯನ್ನು ರೂಪಿಸುವುದು, ಧಾರ್ಮಿಕ ಸಾಮರಸ್ಯ ಮತ್ತು ಸಾಮಾಜಿಕ, ಆರ್ಥಿಕ ಉನ್ನತಿಗಾಗಿ ಧರ್ಮಧರ್ಮಗಳ ನಡುವೆ ಸಂವಾದ, ಸರ್ವಧರ್ಮಗಳ ಸಾರ್ವಕಾಲಿಕ ಮೌಲ್ಯಗಳ ಪ್ರಸಾರ, ವಿವಿಧ ಧರ್ಮಗಳ ಪ್ರಾರ್ಥನೆಗಳು ಹಾಗೂ ಹಬ್ಬಗಳಿಗೆ ಉತ್ತೇಜನ ನೀಡುವುದು, ಅಧ್ಯಾತ್ಮದೊಡನೆ ವೈಜ್ಞಾನಿಕ ದೃಷ್ಟಿಯನ್ನು ಮೇಳೈಸುವುದು, ಪ್ರಮುಖ ಸಾಮಾಜಿಕ ಸಮಸ್ಯೆಗಳಿಗೆ ಆಧ್ಯಾತ್ಮಿಕ ವಿಧಾನಗಳಿಂದ ಪರಿಹಾರಗಳನ್ನು ಕಂಡುಹಿಡಿಯುವುದು, ಶೈಕ್ಷಣಿಕ ಸಂಸ್ಥೆಗಳಲ್ಲಿ ಸಾರ್ವತ್ರಿಕ ಆಧ್ಯಾತ್ಮಿಕ ಮೌಲ್ಯಗಳಿಗೆ ಒತ್ತುಕೊಡುವುದು ಹಾಗೂ ಅವುಗಳ ಆಚರಣೆ, ಕೃತಿ ಪ್ರಕಟಣೆ ಹಾಗೂ ವಿದ್ಯುನ್ಮಾನ ಸಾಧನಗಳ ಮೂಲಕ ಮೌಲ್ಯವರ್ಧನೆ—ಇವು ಪ್ರತಿಷ್ಠಾನದ ಪ್ರಮುಖ ಧ್ಯೇಯೋದ್ದೇಶಗಳಾಗಿವೆ.

ಈ ಪ್ರತಿಷ್ಠಾನದ ಕರ್ನಾಟಕ ರಾಜ್ಯ ಘಟಕದ ಉದ್ಘಾಟನೆಯು ೨೭.೦೬.೨೦೦೪, ಭಾನುವಾರ ಬೆಳಗ್ಗೆ ೧೦.೩೦ಕ್ಕೆ ಮೈಸೂರಿನ ಜೆ.ಎಸ್.ಎಸ್. ಮಹಿಳಾ ಕಾಲೇಜು ಸಭಾಂಗಣದಲ್ಲಿ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ನೇತೃತ್ವದಲ್ಲಿ ಜರುಗಿತು. ವಿವಿಧ ಮತ ಮತ್ತು ಸಂಘಸಂಸ್ಥೆಗಳಿಗೆ ಸೇರಿದ ೧೫ ಧಾರ್ಮಿಕ ಮುಖಂಡರು ಇದರಲ್ಲಿ ಪಾಲ್ಗೊಂಡಿದ್ದರು. ರಾಮಕೃಷ್ಣ ಮಹಾಸಂಘವನ್ನು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಅವರು ಪ್ರತಿನಿಧಿಸಿದ್ದರು.

## ಜ್ಞಾನವಾಹಿನಿ ಕಾರ್ಯಕ್ರಮಗಳು



ಮಂಡ್ಯ ತಾಲೋಕು ಕೊಮ್ಮೇರನ ಹಳ್ಳಿಯ ವಿಶ್ವಮಾನವ ವಿದ್ಯಾಸಂಸ್ಥೆಯಲ್ಲಿ ಗಜರಾಜನೊಡನೆ ಸ್ವಾಮೀಜಿಯವರ ಪ್ರತಿಮೆಯ ಮೆರವಣಿಗೆ

ಮೈಸೂರು ರಾಮಕೃಷ್ಣ ಆಶ್ರಮದ ಜ್ಞಾನವಾಹಿನಿ ಕಾರ್ಯಕ್ರಮವು ಜೂನ್ ತಿಂಗಳ ೭ನೆ ತಾರೀಖಿನಿಂದ ಜುಲೈ ತಿಂಗಳ ೮ ನೆಯ ತಾರೀಖಿನವರೆಗೆ ಮಂಡ್ಯ ಜಿಲ್ಲೆಯ ಸುಮಾರು ೪೦ ಹಳ್ಳಿಗಳಲ್ಲಿ ತನ್ನ ಅಭಿಯಾನವನ್ನು ಜರುಗಿಸಿತು. ಈ ಸಂದರ್ಭದಲ್ಲಿ ನಡೆಸಲಾದ ಶೋಭಾಯಾತ್ರೆಗಳಲ್ಲಿ ೮೦೦೦ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ೫೦ ಶಾಲಾಕಾಲೇಜುಗಳಲ್ಲಿ ನಡೆಸಲಾದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳಲ್ಲಿ ೧೨೫೦೦ ಬಾಲಕಬಾಲಕಿಯರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಸಂಜೆ ನಡೆದ ಗ್ರಾಮಮಟ್ಟದ ಸತ್ಸಂಗ ಮತ್ತು ದಿವ್ಯತ್ರಯರ ಜೀವನಸಂದೇಶಗಳ ಚಲನಚಿತ್ರಪ್ರದರ್ಶನದಲ್ಲಿ ೭೦೦೦ಕ್ಕೂ ಹೆಚ್ಚು ಗ್ರಾಮಸ್ಥರು ಭಾಗವಹಿಸಿದ್ದರು.

ಆಗಸ್ಟ್ ೧ ರಿಂದ ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯಕ್ರಮವು ನಡೆಯಲಿದೆ. ಅಲ್ಲಿ ನಡೆಯಲಿರುವ ಕಾರ್ಯಕ್ರಮಗಳ ವಿವರಗಳನ್ನು ಶ್ರೀಯುತ ಎಲ್. ಎಸ್. ಶಿವನ ಗೌಡ, ಶ್ರೀ ಮಾಲತೇಶ ಖಾನಾವಳಿ, ಬಸ್‌ಸ್ಟಾಂಡ್ ಎದುರು, ಕೊಪ್ಪಳ ೫೮೦೦೩೧, ಫೋನ್ ನಂ. 08539-430114 ಇವರಿಂದ ಪಡೆಯಬಹುದು.

"ವಿವೇಕಪ್ರಭ" ಪತ್ರಿಕೆಯ ಸ್ಥಳೀಯ ಚಂದಾದಾರರೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ವಿನಂತಿ.